

ಮೃದು ಮನಸ್ಸಿನ ಮಕ್ಕಳು ಸಣ್ಣಪುಟ್ಟ ಕಾರಣಗಳಿಗಾಗಿ ಮನಸ್ಸಿನ ಸ್ಥಿಮಿತ ಕಳೆದುಕೊಳ್ಳುವುದೇಕೆ? ಕುಟುಂಬದ ಕುಡಿ ಕೊನರುವ ಮುನ್ನವೇ ಕಮರುವುದೇಕೆ?

ಡಾ. ಕೆ.ಎಸ್. ಪವಿತ್ರ

# ಕಮರುವ ಕುಡಿ ಕೊನರಲು ಬಿಡಿ!

ಮಕ್ಕಳ ಮನಸ್ಸು ಹೂವಿನಂಥದ್ದು. ಪುಟಾಣಿ ಮಕ್ಕಳು ಮನೆತುಂಬ ಓಡಾಡಿಕೊಂಡಿದ್ದರೆ ಮನೆಯೇ ನಂದನವನ ಆಗುತ್ತದೆ. ಇದಕ್ಕಾಗಿಯೇ 'ಮಕ್ಕಳಿರಲವ್ವ ಮನೆತುಂಬ' ಎಂಬ ಮಾತು ಜನಪ್ರಿಯವಾಗಿರುವುದು. ಮಕ್ಕಳೇ ದೇಶದ ಮುಂದಿನ ಸತ್ಪ್ರಜೆಗಳು.

ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಯಾಕೋ ಈಗಿನ ಮಕ್ಕಳ ಮನಸ್ಸು ಸ್ಥಿಮಿತ ಕಳೆದುಕೊಳ್ಳುತ್ತಿದೆಯೇನೊ ಅನಿಸುತ್ತಿದೆ. ಸಣ್ಣಪುಟ್ಟ ಕಾರಣಗಳಿಗಾಗಿ ಮಕ್ಕಳು ಜೀವನಕ್ಕೇ ಅಂತ್ಯಹಾಡುತ್ತಿರುವ ಘಟನೆಗಳು ಅಲ್ಲಲ್ಲಿ ಘಟಿಸುತ್ತಲೇ ಇವೆ. ಹೂಮನದ ಮಕ್ಕಳು ಅರಳುವ ಮುನ್ನವೇ ಬಾಡಿಹೋಗುತ್ತಿರುವುದು ಖೇದಕರ. ಕುಟುಂಬದ ಕುಡಿ ಕೊನರುವ ಮೊದಲೇ ಕಮರುತ್ತಿರುವುದು ಯಾವ ಕಾರಣಗಳಿಗಾಗಿ? ಎಲ್ಲರೂ ಯೋಚಿಸಬೇಕಾದ ವಿಚಾರವಿದು.

ಮೊನ್ನೆ ಮೊನ್ನೆ ನಡೆದ ಘಟನೆಯನ್ನೇ ಜ್ಞಾಪಿಸಿಕೊಳ್ಳೋಣ. ಪಟಾಕಿ ಹಚ್ಚಿದ್ದಕ್ಕೆ ಶಾಲೆಯ ಪ್ರಾಂಶುಪಾಲರು, ಶಿಕ್ಷಕರು ಬೈದರು; ಬೈಸಿಕೊಂಡ 16 ವರ್ಷದ ಹುಡುಗ ಮನೆಗೆ ಹೋದದ್ದೇ, ಕೋಣೆಗೆ ಹೋಗಿ ನೇಣು ಬಿಗಿದುಕೊಂಡ. ಮತ್ತೊಂದು ಪ್ರಕರಣದಲ್ಲಿ 23ನೇ ಮಹಡಿಯಿಂದ ಹಾರಿ 17ರ ಯುವಕ ಪ್ರಾಣ ಕಳೆದುಕೊಂಡ. ಕಾರಣ? ಯಾರಿಗೂ ಗೊತ್ತಿಲ್ಲ. ಆತ್ಮಹತ್ಯೆಯ ಹೊತ್ತಿನಲ್ಲಿ ಬರೆದ ಚೀಟಿಯಲ್ಲಿ ಆತ ಹೇಳಿದ್ದು 'ನನ್ನನ್ನು ಕ್ಷಮಿಸಿ. ನಾನು ಸಾಯುತ್ತಿರುವುದು ನಾನು ದಪ್ಪ ಇರುವುದಕ್ಕಲ್ಲ, ನಾನು ಓದದೇ ಇರುವುದಕ್ಕೂ ಅಲ್ಲ'. ಮತ್ತೊಂದು ವರದಿಯಲ್ಲಿ 14 ವರ್ಷದ ಬಾಲಕಿ ತನ್ನ 'ಫ್ರೆಂಡ್ ರಿಕ್ವೆಸ್ಟ್' ಅನ್ನು ಹುಡುಗನೊಬ್ಬ ಒಪ್ಪಿಕೊಳ್ಳಲಿಲ್ಲ ಎಂಬ ಕಾರಣಕ್ಕೆ ಕೈ ಕೊಯ್ದುಕೊಂಡು ಪ್ರಾಣ ತೆತ್ತಳು. 15ರ ಬಾಲಕ, ಹಾಸ್ಟೆಲ್ ವಾರ್ಡನ್ ಆತನ ತಾಯಿಗೆ ಹುಟ್ಟಿದ ಹಬ್ಬದ ಶುಭ ಹಾರೈಸಲು ಬಿಡಲಿಲ್ಲ ಎಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡ.

ಗಾಬರಿ, ಗೊಂದಲ, ವಿಷಾದ, ಅಚ್ಚರಿ ಎಲ್ಲವೂ ಮಿಶ್ರವಾದ ಭಾವನೆ ಉಂಟಾಗುತ್ತದೆ. ಇಂತಹ ಸುದ್ದಿಗಳನ್ನು ಓದಿದಾಗ ಮನಸ್ಸು ಕದಡುತ್ತದೆ. ಸಂತಸದಿಂದ, ಭವಿಷ್ಯದ ಕನಸುಗಳನ್ನು ಕಟ್ಟಬೇಕಾದ ಹದಿಹರೆಯದ ಸಮಯದಲ್ಲಿ ಭಯಾನಕ ಎನ್ನಿಸುವ ಸಾವಿನ ನಿರ್ಧಾರಗಳನ್ನು ಈ ಮಕ್ಕಳು ಕೈಗೊಳ್ಳುವುದೇಕೆ? ತಮ್ಮ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ ಅಪ್ಪ ಅಮ್ಮಂದಿರನ್ನು ಅವರು ಆ ಸಮಯದಲ್ಲಿ ನೆನಪಿಸಿಕೊಳ್ಳಲಿಲ್ಲವೆ? ಅವರಿಗೆ ತಮ್ಮ ಸಾವಿನಿಂದ ಶಿಕ್ಷೆ ಜೀವನ ಪೂರ್ತಿ ದೊರಕಲಿ ಎಂಬ ಕೋಪದಿಂದ ಹೀಗೆ ಮಾಡಿರಬಹುದೆ? ಎಂಬ